

ಆಸ್ಟ್ರೇಲಿಯಾದ ಸರ್ಕಸ್ ತಂಡ ಬ್ರಿಫ್ಸ್ ಲಂಡನ್ನಿನ ಓವಲ್ ಕ್ರಿಕೆಟ್ ಮೈದಾನದ ಎದುರು ಹೀಗೊಂದು ಕ್ರಿಕೆಟ್ ಪಂದ್ಯವಾಡುತ್ತಿದೆ. ಪ್ರೇಕ್ಷಕರು ಮೈದಾನದ ಹೊರಗಡೆಯ ಈ ಕ್ರಿಕೆಟ್ ಅನ್ನು ಮುಗಿಬಿದ್ದು ನೋಡುತ್ತಿದ್ದಾರಂತೆ. ಕ್ರಿಕೆಟ್‌ಗಿಂತ ಕ್ರಿಕೆಟ್‌ನ ವಿಡಂಬನೆಯೇ ಹೆಚ್ಚು ರಂಜಿಸುತ್ತಿರಬಹುದು.



ಅಮೆರಿಕಾದ ಲಾಸ್‌ವೇಗಾಸ್ ಎಂದರೆ ಜೂಜುಕೇಂದ್ರಗಳು ನೆನಪಾಗುತ್ತವೆ. ಅಲ್ಲಿ ಮೋಜು- ಮಸ್ತಿಗೆ ಎಲ್ಲೆಯೇ ಇಲ್ಲ. ಈಗ ಅವುಗಳಿಗೆ ಹೊಸ ಸೇರ್ಪಡೆ ಕೇವಲ ಒಳ ಉಡುಪು ಮಾತ್ರ ತೊಟ್ಟ ಮಹಿಳೆಯರ ಕುಸ್ತಿ ಸ್ಪರ್ಧೆ. ಕುಸ್ತಿಪಟುಗಳ ಅಡ್ಡ ಹೆಸರುಗಳೂ ವಿಚಿತ್ರ. ಬ್ಲಡಿ, ನ್ಯೂಕ್ಲಿಯರ್... ಇತ್ಯಾದಿ. ಬಾಜಿ ಕಟ್ಟುವವರಿಗೂ ಸುಲಭ. ಬ್ಲಡಿ, ಈಡಿಯಟ್.. ಎಂದು ಷಾರ್ಟ್ ಮತ್ತು ಸ್ವೀಟಾಗಿ ಅರುಹಿದರೆ ಸಾಕು.

ತನ್ನ ಗೆಳತಿಯ ಮಾಜಿ ಸ್ನೇಹಿತನ ಮೇಲೆ ಹಲ್ಲೆ ನಡೆಸಿದ ತಪ್ಪಿಗೆ ಟೆಕ್ಸಾಸ್‌ನ ಬಂಡಿ ಎಂಬಾತನಿಗೆ 15 ದಿನ ಜೈಲು ಅಥವಾ ಮದುವೆ ಎಂದು ಶಿಕ್ಷೆ ನೀಡಿದರಂತೆ ನ್ಯಾಯಾಧೀಶರು. ಈಗ ಬಂಡಿ ಸ್ನೇಹಿತೆಯ ಜೊತೆ ತರಾತುರಿಯಲ್ಲಿ ಮದುವೆಯಾಗಿದ್ದು, ಬಲವಂತದ ಮದುವೆ ಎಂದು ಟಿವಿ ಸ್ಟುಡಿಯೋದಲ್ಲಿ ಕುಳಿತು ದೂರುತ್ತಿದ್ದಾನಂತೆ. ಜೈಲಾದರೆ 15 ದಿನಗಳಲ್ಲೇ ಶಿಕ್ಷೆ ಮುಗಿಯುತ್ತಿತ್ತು, ಈಗ ಜೈಲಿನ ಹೊರಗೆ ಎಷ್ಟು ವರ್ಷಗಳ ಕಾಲ ಶಿಕ್ಷೆ ಅನುಭವಿಸಬೇಕೋ!

ಮಾದಕ ದ್ರವ್ಯ ಮಾರಿಜುವಾನ ಹಾಗೂ ಕೊಕೇನ್ ಕಳ್ಳಸಾಗಣೆ ಮಾಡುತ್ತಿದ್ದ ಪಾರಿವಾಳವನ್ನು ಕೋಸ್ಟಾರಿಕಾದ ಪೊಲೀಸರು ಜೈಲಿನ ಸಮೀಪವೇ ಬಂಧಿಸಿದ್ದಾರಂತೆ. ಎಫ್.ಐ.ಆರ್.ನಲ್ಲಿ 'ನಾರ್ಕೊ ಪಾರಿವಾಳ' ಎಂದು ನಮೂದಿಸಿಕೊಂಡಿದ್ದಾರಂತೆ. ಕೈದಿ ಪಾರಿವಾಳ ಈಗ ಪಂಜರದಲ್ಲಿ ಹಾರಾಡಿಕೊಂಡಿದೆ. ಈ ನಾರ್ಕೊ ಪಾರಿವಾಳವನ್ನು ಬಿಡಿಸಲು ನೂರಾರು ಪಾರಿವಾಳಗಳು ಅಲ್ಲಲ್ಲಿ ಪ್ರತಿಭಟನೆ ನಡೆಸುತ್ತಿರಬಹುದು.



ಅಜರ್‌ಬೇಝಾನ್‌ಗೆ ಪ್ರವಾಸ ಹೋದರೆ ಬಿಸಿ ತೈಲದ ಸ್ಪಾ ಸುಖ ಸವಿಯಬಹುದು. ಅದು ಬೆಂಗಳೂರಲ್ಲೂ ಇದೆ ಎಂದಿರಾ? ಆದರೆ ಅಲ್ಲಿರುವುದು ಕಚ್ಚಾ ತೈಲದ ಸ್ಪಾ. ಅದರಲ್ಲಿ ಔಷಧೀಯ ಗುಣಗಳಿವೆ ಎಂದು ಪ್ರಚಾರ ಮಾಡಲಾಗುತ್ತಿದೆಯಂತೆ. ಪೆಟ್ರೋಲ್, ಡೀಸೆಲ್ ದರಗಳಲ್ಲಿ ಏರಿಳಿತ ಇರುವುದರಿಂದ ಸ್ಪಾ ಶುಲ್ಕದಲ್ಲೂ ಚೌಕಾಶಿ ಮಾಡಬಹುದು.



ಬೆಲ್ಜಿಯಂನ ಪೀಟರ್ ಮತ್ತು ಪೌಲಸ್ ಜಗತ್ತಿನ ಅತ್ಯಂತ ಹಿರಿಯ ಅವಳಿ ಸಹೋದರರಂತೆ. 102 ವರ್ಷ ವಯಸ್ಸಿನ ಈ ಬ್ರಹ್ಮಚಾರಿ ಅಜ್ಜಂದಿರ ಆಯಸ್ಸಿನ ಗುಟ್ಟು ನಿತ್ಯ ಒಂದು ಗ್ಲಾಸ್ ವೈನ್ ಸೇವನೆ ಮತ್ತು ಹುಡುಗಿಯರ ಹಿಂದೆ ಬೀಳದಿರುವುದು. ಮತ್ತೆ ವಯಸ್ಸಿದ್ದೂ ಪ್ರಯೋಜನವೇನು ಎಂದು ಯುವಕರು ಅಲವತ್ತುಕೊಳ್ಳುತ್ತಿರಬಹುದು.